# ತಿರುವನಂತಪುರದಲ್ಲಿ ಹಚ್ಚಿದರು ಕನ್ನಡದ ದೀಪ

ತಿರುವನಂತಪುರದ 'ಕರ್ನಾಟಕ ಸಂಘ' ಕನ್ನಡ ಸಂಸ್ಕೃತಿಯನ್ನು ಪ್ರತಿನಿಧಿಸುವ ಕೆಲಸವನ್ನಷ್ಟೇ ಮಾಡುತ್ತಿಲ್ಲ; ಮಲಯಾಳಂ ಭಾಷೆಯೊಂದಿಗೆ ಕೊಡುಕೊಳು ಸಂವಹನವನ್ನೂ ನಡೆಸುತ್ತಿದೆ. ಈ ಅಪರೂಪದ ಸಂಘಟನೆಗೀಗ ಐವತ್ತರ ಸಂಭ್ರಮ.

■ ಶ್ಯಾಮಲಾ ಸತ್ಯ



'ಕರ್ನಾಟಕ ಸಂಘ'ದ ವತಿಯಿಂದ ನಾಟಕ ಪ್ರದರ್ಶನ




'ಕರ್ನಾಟಕ ಸಂಘ'ದ ಪ್ರಕಟಣೆಗಳು

ಕೇರಳದ ತಿರುವನಂತಪುರದಲ್ಲಿ ಕಳೆದ ಐವತ್ತು ವರ್ಷಗಳಿಂದಲೂ ಕನ್ನಡ ಜ್ಯೋತಿಯೊಂದು ನಂದಾದೀಪದಂತೆ ಉರಿಯುತ್ತಿದೆ. ಈ 'ಕರ್ನಾಟಕ ಸಂಘ' ತನ್ನ 50ನೇ ವರ್ಷದ ಹುಟ್ಟುಹಬ್ಬವನ್ನು ಇತ್ತೀಚೆಗಷ್ಟೇ ಸಂಭ್ರಮದಿಂದ ಆಚರಿಸಿಕೊಂಡಿದೆ.

ತಿರುವನಂತಪುರದಲ್ಲಿ 'ಕರ್ನಾಟಕ ಸಂಘ' ಆರಂಭವಾದುದು 1971ರಲ್ಲಿ. ಉದ್ಯೋಗದ ಕಾರಣದಿಂದಾಗಿ ಕರ್ನಾಟಕದ ವಿವಿಧ ಭಾಗಗಳಿಂದ ತಿರುವನಂತಪುರಕ್ಕೆ ವಲಸೆ ಬಂದ ಕನ್ನಡಿಗರು ಒಂದುಗೂಡಿ ರೂಪಿಸಿದ ಸಂಘವಿದು. ಕೇರಳದ ಅಂದಿನ ರಾಜ್ಯಪಾಲ ವಿ. ವಿಶ್ವನಾಥನ್ ಅವರು ಸಂಘವನ್ನು ಉದ್ಘಾಟಿಸಿದ್ದರು.

ಕಳೆದ ಐವತ್ತು ವರ್ಷಗಳಲ್ಲಿ ಸಂಘ ನಿರಂತರವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ, ಕೇರಳದ ನೆಲದಲ್ಲಿ ಕನ್ನಡ ಪ್ರಜ್ಞೆಯನ್ನು ಜೀವಂತವಾಗಿ ಇರಿಸುವ ಕೆಲಸವನ್ನು ಮಾಡುತ್ತಾ ಬಂದಿದೆ.

ಕರ್ನಾಟಕ ಸಂಘದ ವೈಶಿಷ್ಟ್ಯ, ಕರ್ನಾಟಕ–ಕನ್ನಡ ಸಂಸ್ಕೃತಿಯನ್ನು ಬಿಂಬಿಸುವ ಅನೇಕ ಬಗೆಯ ಕಾರ್ಯಕ್ರಮವನ್ನು ಮಾಡುವುದರಲ್ಲಿ ಮಾತ್ರವಿಲ್ಲ; ಕೇರಳದ ಭಾಷೆ, ಸಂಸ್ಕೃತಿಯೊಡನೆ ಸಂವಾದ–ಸಖ್ಯ ನಡೆಸಿರುವ ಸೃಜನಶೀಲ ಸಂವಹನದಲ್ಲೂ ಇದೆ. ಪುರಂದರದಾಸರ ಐವತ್ತು ಕೃತಿಗಳನ್ನು ಮಲಯಾಳಂ ಭಾಷೆಗೆ ತರ್ಜುಮೆ ಮಾಡಿ, ಸ್ವರ ಪ್ರಸ್ತಾರದೊಂದಿಗೆ ಸಂಘ ಪ್ರಕಟಿಸಿದೆ. ಕೇರಳದ ಪ್ರಮುಖ ಸಂಗೀತಗಾರರಿಗೆ ಆ ಕೃತಿಯನ್ನು ಉಚಿತವಾಗಿ ತಲುಪಿಸಿದೆ. ಹಾಗೆಯೇ ಕೇರಳದ ಪ್ರಸಿದ್ಧ ವಾಗ್ಗೇಯಕಾರರಾದ ಮಹಾರಾಜ ಸ್ವಾತಿ ತಿರುನಾಳರ ಐವತ್ತು ಕೃತಿಗಳನ್ನು ಕನ್ನಡ ಭಾಷೆಗೆ ತರ್ಜುಮೆ ಮಾಡಿಸಿ, ಕರ್ನಾಟಕದ ಸಂಗೀತಗಾರರಿಗೆ ಗೌರವಪೂರ್ವಕವಾಗಿ ನೀಡಿದೆ.

ಮಲಯಾಳಂ ಸಾಹಿತ್ಯದ ಸಮಗ್ರ ಪರಿಚಯವನ್ನು ಕನ್ನಡದ ಓದುಗರಿಗೆ ಸ್ಥೂಲವಾಗಿ ಕೊಡಬೇಕೆಂಬ ನಿಟ್ಟಿನಲ್ಲಿ ಕನ್ನಡದಲ್ಲಿ 'ಮಂದಾರ ಮಲ್ಲಿಗೆ' ಎಂಬ ಪುಸ್ತಕವನ್ನು ಪ್ರಕಟಿಸಿದೆ. ಈ ಮಂದಾರವನ್ನು ಕರ್ನಾಟಕದ ಹಲವು ಪುಸ್ತಕ ಭಂಡಾರಗಳಿಗೆ ಉಚಿತವಾಗಿ ತಲುಪಿಸಿದೆ. 'ಕೇರಳ ಕಲಾಮಾಲಾ' ಎಂಬ, ವರ್ಣಚಿತ್ರಗಳಿಂದ ಕೂಡಿದ ಕೇರಳ ಕಲಾಮಾಧ್ಯಮಗಳ ಬಗೆಗಿನ ಕೃತಿಯನ್ನು ಅಲ್ಲಿನ ಸಾಹಿತಿಗಳ ಸಹಾಯದಿಂದ ಪ್ರಕಟಿಸಿದೆ.

ಸಂಘದ ಕಾರ್ಯಕ್ರಮದಲ್ಲಿ ಕೇರಳದ ಸಾಹಿತಿಗಳು, ಪ್ರಸಿದ್ಧ ಸಂಗೀತಗಾರರು, ವಿದ್ವಾಂಸರುಗಳು ಹಾಗೂ ತಿರುವಾಂಕೂರ್ ರಾಜಮನೆತನದವರು ಸಕ್ರಿಯವಾಗಿ ಪಾಲ್ಗೊಳುತ್ತಾ ಬಂದಿದ್ದಾರೆ. ಸಂಘದ ಸದಸ್ಯತ್ವದಲ್ಲಿ ಅನೇಕ ಮಲಯಾಳಿಗಳೂ ಇದ್ದಾರೆ.

ಕಳೆದ ವರ್ಷ ಕೊರೊನಾ ಸಾಂಕ್ರಾಮಿಕದ ಕಾರಣದಿಂದಾಗಿ ಕರ್ನಾಟಕ ಸಂಘದ ಚಟುವಟಿಕೆಗಳು ಸ್ಥಗಿತಗೊಂಡಿದ್ದವು. ಈಗ ಕೊರೊನಾ ಆತಂಕ ಕಡಿಮೆಯಾಗಿರುವ ಸಂದರ್ಭದಲ್ಲಿ ಸಂಘ ಮತ್ತೆ ಕ್ರಿಯಾಶೀಲವಾಗುವ ಪ್ರಯತ್ನ ನಡೆಸಿದೆ. ಸಂಘದ ಐವತ್ತು ವರ್ಷಗಳ ಹುಟ್ಟುಹಬ್ಬದ ಸಂಭ್ರಮದ ಆಚರಣೆ ಇತ್ತೀಚೆಗಷ್ಟೇ ನಡೆದಿದೆ.

ಸಂಘದ ವಾರ್ಷಿಕ ಚಟುವಟಿಕೆಗಳು ವೈವಿಧ್ಯಮಯ. ನಾಟಕ, ದೃಶ್ಯ ರೂಪಕಗಳು, ನೃತ್ಯ, ಸಂಗೀತ, ಆಟೋಟ, ಪ್ರವಾಸ ಇವುಗಳೆಲ್ಲ ಸಂಘದ ಪ್ರಮುಖ ಚಟುವಟಿಕೆಗಳಾಗಿವೆ. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರುಗಳು, ರಂಗಕರ್ಮಿಗಳು, ಸಾಹಿತಿಗಳು, ಸಂಗೀತಗಾರರು – ಹೀಗೆ ಅನೇಕರು ತಿರುವನಂತಪುರಕ್ಕೆ ಬಂದು ಕರ್ನಾಟಕ ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

ದೇಶದ ವಿವಿಧ ಭಾಗಗಳಲ್ಲಿ ಹಾಗೂ ವಿದೇಶಗಳಲ್ಲೂ ಕನ್ನಡ ಸಂಘಗಳು ಸಾವಿರಾರು ಸಂಖ್ಯೆಯಲ್ಲಿವೆ. ಈ ಸಂಘಗಳು ತಮ್ಮದೇ ಆದ ಮಿತಿಯಲ್ಲಿ ಕನ್ನಡವನ್ನು ನಾಡಿನಾಚೆಗೂ ಜೀವಂತವಾಗಿಡುವ ಪ್ರಯತ್ನ ನಡೆಸಿವೆ. ಇಂಥ ಕಾಯಕದಲ್ಲಿ ತೊಡಗಿಕೊಂಡಿರುವ ತಿರುವನಂತಪುರದ 'ಕರ್ನಾಟಕ ಸಂಘ' – ಸ್ಥಳೀಯ ಭಾಷೆ ಹಾಗೂ ಸಂಸ್ಕೃತಿಯೊಂದಿಗೆ ಕೊಡುಕೊಳೆ ಸಂಬಂಧವನ್ನು ಸಾಧಿಸಿರುವುದು ವಿಶೇಷ. ಈ ಸಾಮರಸ್ಯದ ಕಾರಣದಿಂದಲೇ ಕರ್ನಾಟಕ ಸಂಘ ಕೇರಳೀಯರ ಮನ್ನಣೆಗೂ ಪಾತ್ರವಾಗಿದೆ. ಸಂಘದ ಮನೋಧರ್ಮವನ್ನು ಕೇರಳದ ಅನೇಕರು ಪ್ರಶಂಸಿಸಿದ್ದಾರೆ; ಪತ್ರಿಕೆಗಳೂ ಮೆಚ್ಚಿ ಬರೆದಿವೆ.

ಪ್ರತಿಕ್ರಿಯಿಸಿ: feedback@sudha.co.in